**ಓ.ಎಸ್.ನಂ. 385/2021**

**ಪಿ.ಡಬ್ಲ್ಯೂ: 1**

ದಿನಾಂಕ:06-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಬಿ ಆರ್ ಪ್ರತಿವಾದಿ ಪರ ವಕೀಲರಿಂದ:-**

ನಾನು ಪ್ರಸ್ತುತ ಕಡೂರಿನಲ್ಲಿ ವಾಸ ಇದ್ದೇನೆ. . ಕಳೆದ 10 ವರ್ಷದಿಂದ ಕಡೂರಿನಲ್ಲಿ ವಾಸ ಇದ್ದೇನೆ. ಕಡೂರಿನಲ್ಲಿ ನಾನು ಮತ್ತು ನನ್ನ ತಂದೆ ಒಟ್ಟಿಗೆ ಇದ್ದೇವೆ. ದಾವಾ ಸ್ವತ್ತು ಒಗರೆಹಳ್ಳಿಯಲ್ಲಿ ಇದೆ. ದಾವಾ ಸ್ವತ್ತು ಕಡೂರಿನಿಂದ 30-40 ಕಿ.ಮಿ ಅಂತರದಲ್ಲಿ ಇದೆ. ದಾವಾ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿ ಇದೆ. ದಾವಾ ಸ್ವತ್ತು ನನ್ನ ತಂದೆಗೆ ಅಜ್ಜಿಯಿಂದ ಬಂದಿರುತ್ತದೆ. ದಾವಾ ಸ್ವತ್ತನ್ನು ನನ್ನ ಅಜ್ಜಿ 2004 ರಲ್ಲಿ ವಿಲ್ ಬರೆದಿರುತ್ತಾರೆ ಮತ್ತು ನನ್ನ ತಂದೆಗೆ ಖಾತೆಯಾಗಿರುತ್ತದೆ. ನನ್ನ ತಂದೆಗೆ ಖಾತೆ ಬದಲಾಗಿದ್ದಕ್ಕೆ ಎಂ ಆರ್ ಮತ್ತು ಕಂದಾಯ ರಶೀದಿ ಹಾಜರುಪಡಿಸಿರುತ್ತೇನೆ. ನಿಪಿ-2 ರಲ್ಲಿ ವಿಲ್ ಮುಖಾಂತರ ಖಾತೆ ಬದಲಾದ ಬಗ್ಗೆ ನಮೂದು ಇರುವುದಿಲ್ಲ. ನಿಪಿ-2 ಖಾತೆ ಬದಲಾದ ಬಗ್ಗೆ ದಾಖಲೆಯಾಗಿರುವುದಿಲ್ಲ. ಪ್ರಸ್ತುತ ಸ್ವತ್ತಿನ ಬಗ್ಗೆ ನನ್ನ ತಂದೆ ನನಗೆ ಯಾವುದೇ ದಾಖಲೆ ಬರೆದುಕೊಟ್ಟಿರುವುದಿಲ್ಲ. ದಾವಾ ಸ್ವತಿನ ಮೇಲೆ ನನಗೆ ಸಂಬಂಧ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ.

ದಾವಾ ಸ್ವತಿನಲ್ಲಿ ಮೊದಲು ಆಲೂಗಡ್ಡೆ ಮತ್ತು ಮೆಕ್ಕಜೋಳ ಬೆಳೆದಿದ್ದೆವು, ಆದರೆ ಈಗ ಯಾವುದೇ ಬೆಳೆ ಬೆಳೆದಿರುವುದಿಲ್ಲ ಕಾರಣ ಪ್ರತಿವಾದಿಗಳು ಬಂದು ಸ್ವತಿಗೆ ತೊಂದರೆ ನೀಡುತಿದ್ದಾರೆ. 2021 ರಿಂದ ನಾವು ಯಾವುದೇ ಬೆಳೆ ಬೆಳೆದಿರುವುದಿಲ್ಲ. 2020 ರಲ್ಲಿ ನಾವು ಆಲೂಗಡ್ಡೆ ಮತ್ತು ಮೆಕ್ಕೆಜೋಳ ಬೆಳೆದಿದೆವು. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇದೆ. ನಿಪಿ-1 ರಲ್ಲಿ ಏನು ಬೆಳೆ ಬೆಳೆದಿದೆ ಎಂದು ನಾನು ನೋಡಿರುವುದಿಲ್ಲ. 2020 ರಲ್ಲಿ ನಾವು ಆಲೂಗಡ್ಡೆ ಬೆಳೆದಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಬಗ್ಗೆ ನನ್ನ ತಂದೆ ಯಾವ ಯಾವ ವ್ಯವಹಾರ ಮಾಡಿದ್ದಾರೆ ಎಂದು ನನಗೆ ತಿಳಿದಿದೆ. 2011 ರಲ್ಲಿ ನಮಗೆ ವೈದ್ಯಕೀಯ ತುರ್ತು ಇದ್ದುದ್ದರಿಂದ 1 ಲಕ್ಷದ 25 ಸಾವಿರಕ್ಕೆ ಮಂಜುನಾಥ್ ರವರಿಗೆ 4 ವರ್ಷಕ್ಕೆ ಗುತ್ತಿಗೆಗೆ ನೀಡಿದ್ದೆವು ಮತ್ತು 2015 ರಲ್ಲಿ ಸ್ವತ್ತನ್ನು ಮಂಜುನಾಥ್ ರವರಿಂದ ವಾಪಸ್ಸು ಪಡೆದಿರುತ್ತೇವೆ. 1 ಲಕ್ಷದ 25 ಸಾವಿರಕ್ಕೆ ಗುತ್ತಿಗೆಗೆ ನೀಡಲಾಗಿದೆ ಎಂದು ದಾಖಲೆಯಾಗಿರುವುದಿಲ್ಲ, ಸಾಕ್ಷಿ ಮುಂದುವರೆದು ಆದರೆ 1 ಲಕ್ಷದ 25 ಸಾವಿರ ಪಾವತಿಯಾಗಿದೆ ಎಂದು ಮಂಜುನಾಥ್ ರವರು ಒತ್ತಾಯಪೂರ್ವಕವಾಗಿ ನನ್ನ ತಂದೆಯಿಂದ ಖಾಲೀ ಪತ್ರಕ್ಕೆ ಸಹಿ ಮಾಡಿಸಿಕೊಂಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. 2011 ರಲ್ಲಿ ಗುತ್ತಿಗೆಗೆ ನೀಡಿದಾಗ ಸ್ವಾಧೀನ ನೀಡಿರುತ್ತೇವೆ. 2015 ರಲ್ಲಿ ಸ್ವಾಧೀನ ವಾಪಸ್ಸು ಪಡೆಯುವಾಗ ಪ್ರತಿವಾದಿಯಿಂದ ಯಾವುದೇ ದಾಖಲೆ ಮಾಡಿಸಿಕೊಂಡಿರುವುದಿಲ್ಲ. ಪ್ರತಿವಾದಿಯ ಸ್ವಾಧೀನ ಬಿಟ್ಟುಕೊಟ್ಟಾಗ ನಾವು ಯಾವುದೇ ದಾಖಲೆ ಮಾಡಿಕೊಂಡಿಲ್ಲ ಎಂದರೆ ಸರಿ. ಆ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ.

ನಿಪಿ-3 ದಾವೆ ಚಾಲ್ತಿಯಲ್ಲಿದ್ದಾಗ ಪಾವತಿ ಮಾಡಿದ ಕಂದಾಯ ಎಂದರೆ ಸರಿ. ನಿಪಿ-3 ರಲ್ಲಿ ಸ.ನಂ. ನಮೂದು ಇರುವುದಿಲ್ಲ. 2015 ರಿಂದ ನಮ್ಮ ತಂದೆಗೆ ಖಾತೆಯಾದ ನಂತರ ದಾವೆ ಹಾಕುವವರೆಗೂ ಕಂದಾಯ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ಕಂದಾಯ ಪಾವತಿ ದಾಖಲೆಗಳನ್ನು ಹಾಜರುಪಡಿಸಬಲ್ಲೆ. ನಾವು ಸ್ವಾಧೀನದಲ್ಲಿ ಇಲ್ಲದೇ ಇರುವ ಕಾರಣ ಯಾವುದೇ ಕಂದಾಯ ಪಾವತಿಸಿಲ್ಲ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲೀಗಾಗಿ ಸಮಯಾವಕಾಶ ಕೋರಿದ್ದು, ನೀಡಲಾಯಿತು. )**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.
ಸಹಿ/-

**2 ನೇ.ಹೆ.ಪ್ರಃದಃನ್ಯಾಃದಂ.,ರವರು,**
**ಕಡೂರು.**